


# ಒಂದು ದಿನ

ಅಖಿಲ ಭಾರತ ಪತ್ರಿಕೆ

ಜನವರಿ 2016

ಬೆಲೆ : 15/–



*The whole creation speaks of the Divine to him who knows how to hear within his heart.*

\- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
(ರಿ) ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಒಂದು ದಿನ"

**ಅನು : ಡಾ. ಕೆ.ಎಸ್. ಆಮೂರ**

| | |
|---|---|
| ಒಂದು ದಿನ | 3 |
| ದರ್ಶನ ದಿನಗಳಂದು | 29 |
| 2016 ರ ವಿಶೇಷ ದಿನಾಂಕಗಳು | 34 |
| ನಾಲ್ಕು ದರ್ಶನ ದಿನಗಳು | 35 |
| **ವಾರ್ತಾಪತ್ರ** | 35 |

**(All India Magazine)ದ ಸಂಪಾದಕರ ಟಿಪ್ಪಣಿ:**

ಫೆಬ್ರುವರಿ 29, 1956 ರಂದು ಶ್ರೀಮಾತೆಯವರು ಪೃಥ್ವಿಯ ಮೇಲೆ ಅತಿಮಾನಸ ಪ್ರಕಟವಾಗಿದೆ ಎಂದು ಸಾರಿ ಹೇಳಿದರು. ಆ ಕಾಲದಿಂದ ಹೊಸ ಪ್ರಜ್ಞೆ ಪೃಥ್ವಿಯ ಮೇಲೆ ಕ್ರಿಯಾಶೀಲವಾಗಿದೆ, ಉತ್ಕ್ರಾಂತಿಯ ಹೊಸ ಆವರ್ತ(cycle) ಪ್ರಾರಂಭವಾಗಿದೆ, ಅದು ಮನುಕುಲವನ್ನು ಕ್ರಮೇಣ ಮನಸ್ಸಿನಿಂದಾಚೆಗೆ ಅತಿಮಾನಸ ಸತ್ತೆಯತ್ತ ಕೊಂಡೊಯ್ಯುತ್ತಿದೆ. ಪೃಥ್ವಿಯ ಮೇಲಿನ ಭಗವಂತನ ಈ ವಿಜಯವನ್ನು ಮೊದಲೇ ಕಂಡುಕೊಳ್ಳಲಾಗಿತ್ತು ಮತ್ತು ಪ್ರಾಚೀನ ಕಾಲದ ಭಿನ್ನ ಆಧ್ಯಾತ್ಮಿಕ ಸಂಪ್ರದಾಯಗಳಲ್ಲಿ ಮೊದಲೇ ಹೇಳಲಾಗಿತ್ತು. ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಈ ಭವಿಷ್ಯತ್ತನ್ನು ತೆರೆದು ತೋರಿಸಿದ್ದಾರಷ್ಟೇ ಅಲ್ಲ, ಆದರೆ ಅದನ್ನು ಪೃಥ್ವಿಗಾಗಿ ಹಾಗೂ ಮನುಕುಲಕ್ಕಾಗಿ ಗಳಿಸಿಕೊಟ್ಟಿದ್ದಾರೆ. ಬಹುಕಾಲದಿಂದ ಜೀವನ ಹಾಗೂ ಸೃಷ್ಟಿ ಇವುಗಳ ನೆರವೇರಿಕೆಗಾಗಿ ಹೆಚ್ಚಿನ ರೀತಿಯಲ್ಲಿ ಕಾದುಕೊಂಡಿದ್ದ ನಮಗೆ ಅನುಸರಿಸಿಕೊಂಡು ಹೋಗಬೇಕಾದ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಈ ತಿಂಗಳಿನ ಸಂಚಿಕೆಗಾಗಿ ಇಂತಹ ಕೆಲವು ಪರಿಚ್ಛೇದಗಳನ್ನು ಮಾಂತ್ರಿಕ ಕಾವ್ಯ ಸಾವಿತ್ರಿಯಿಂದ ಆಯ್ದುಕೊಂಡಿದ್ದೇವೆ. ಈ ಪರಿಚ್ಛೇದಗಳು ನಮ್ಮ ಮಾನವ ನಿಶೆಯಲ್ಲಿ ಈ ಭವಿಷ್ಯತ್ತು ಪ್ರಕಾಶ ನೀಡುವುದನ್ನು ಸೂಚಿಸುತ್ತವೆ.

ಈ ತಿಂಗಳಿನ ಸಂಚಿಕೆಯ ವಸ್ತು–ವಿಷಯ (theme) "ಒಂದು ದಿನ" ಎಂದಿದೆ. ಅದು ಈಗಾಗಲೆ ಪ್ರಾರಂಭವಾಗಿರುವ ಅತಿಮಾನಸದ ಪ್ರಕಟಣೆಯು ಪೂರ್ತಿ ಪ್ರಕಟವಾಗುವುದಕ್ಕೆ ಸಾಕ್ಷಿಯಾಗಬಹುದಾದ ಆ ಒಂದು ದಿನಕ್ಕಾಗಿ ಅಭೀಪ್ಸೆಯ ಪ್ರಾಮುಖ್ಯತೆಯನ್ನು ತೋರಿಸುತ್ತದೆ.

ಅತಿಮಾನಸ ಪ್ರಜ್ಞೆಯ ಪ್ರಕಟಣೆಯ ನಂತರ ಪ್ರತಿ ತಿಂಗಳಿನ ಸಂಚಿಕೆಯೂ ಕೂಡ ಶ್ರೀಮಾತೆಯವರು ಹೆಸರು ನೀಡಿದ ಒಂದು ಹೂವಿನ ಚಿತ್ರವನ್ನು ಕೊಂಡೊಯ್ಯುತ್ತದೆ. ಶ್ರೀಮಾತೆಯವರು 900 ಹೂವುಗಳಿಗೆ ಆಧ್ಯಾತ್ಮಿಕ ಪ್ರಾಮುಖ್ಯತೆಯುಳ್ಳ ಹೆಸರುಗಳನ್ನು ನೀಡಿದ್ದಾರೆ. ಆವುಗಳಲ್ಲಿ 60 ಹೂವುಗಳಿಗೆ ಹೆಸರುಗಳನ್ನು ಅತಿಮನಸ್ಸು ಪ್ರಕಟವಾದ ನಂತರ ಕೊಡಲಾಗಿದೆ. ಸೂರ್ಯನ ಪ್ರಕಾಶದಡಿಯಲ್ಲಿ ಅರಳುತ್ತಿರುವ ಸೂರ್ಯಕಾಂತಿ ಹೂವುಗಳಿರುವ ತೋಟದ ಚಿತ್ರವನ್ನು ಕೊಡಲಾಗಿದೆ

*

# ಒಂದು ದಿನ

## ಸ್ವಲ್ಪ ಹೆಚ್ಚು

ಒಂದು ದಿನ, ಅಂದು ಅರ್ಧ ಮೃತವಾದುದಕ್ಕೆಲ್ಲ ಮುಕ್ತಾಯವಿಹುದು,
ಒಂದು ದಿನ, ಅಂದು ಜನಿಸದಿದ್ದದೆಲ್ಲದರ ಆರಂಭವಿಹುದು;
ಅದೊಂದು ಚಿಕ್ಕ ಮಾರ್ಗ ಮತ್ತು ಶ್ರೇಷ್ಠ ಗುರಿ,
ದೈವಿಕವಾಗಿ ಇಡಿಯಾದುದನು ತರುವ ಒಂದು ಸ್ಪರ್ಶ.

ಒಂದು ದಿಬ್ಬದಿಂದ ಇನ್ನೊಂದು ದಿಬ್ಬಕ್ಕೆ ಏರಿ ಹೋಗಲಾಗಿತ್ತು, ಈಗ
ಅಲ್ಲಿ ನೋಡಿರಿ ಪ್ರಬಲ ಏರುಹಾದಿಯ ನೆತ್ತಿಯನು ಮತ್ತು
ಯಾರೂ ಹೆಜ್ಜೆಯಿರಿಸಿರದ ದೊಡ್ಡ ಬಂಡೆಯನು:
ಒಂದು ಹೆಜ್ಜೆ ಮತ್ತು ಅಲ್ಲಿರುವುದೆಲ್ಲವೂ ಆಕಾಶ ಹಾಗೂ ದೇವ.

**(CWSA, 2/542)** – ಶ್ರೀ ಅರವಿಂದರು

*




ಅತಿಮಾನಸದ ಪ್ರಕಟಣೆ
ಅದನ್ನು ಸ್ವಾಗತಿಸಲಾಗುವುದು.

*Botanical name:* Scadoxus multiflorus [Haemanthns multiflorus]

ಜನವರಿ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |



ಶಿವನ ದೈತ್ಯ ನೃತ್ಯವೊಂದು ಗತಕಾಲವನು ಹರಿದುಹಾಕಿಹುದು; ...
ಸರ್ವಶಕ್ತನ ಪ್ರಕಾಶಮಯ ಅಗ್ರಗಾಮಿಗಳು ಜೀವನದೆಡೆ ಹೊರಳುವ
ದಿವ್ಯಲೋಕದ ಅಂಚಿನಲಿ ಜನ್ಮದ ಬಳಿ ಬಂಗಾರದ ಸೋಪಾನಗಳ ಮೇಲೆ
ಗುಂಪುಗೂಡಿ ಕೆಳಗಿಳಿದು ಬರುವುದನು ಕಂಡೆ,
ದೈವೀ ಜನಸ್ತೋಮದ ಮೂಲ ಪ್ರವರ್ತಕರವರು
ಬೆಳಗಿನ ತಾರೆಯ ದಾರಿಗಳಿಂದೀಚೆ ಮರ್ತ್ಯ ಜೀವನದ
ಚಿಕ್ಕ ಕೋಣೆಯಲ್ಲಿ ಬಂದರವರು.
ಯುಗವೊಂದರ ಸಂಧ್ಯಾಕಾಲವನು ದಾಟಿ ಅವರು ಬರುವುದನು ಕಂಡೆ,
ಅದ್ಭುತ ಉಷಃಕಾಲದ ಸೂರ್ಯನಂತಹ ಕಂಗಳಿರುವ ಮಕ್ಕಳವರು,
ಸ್ಥಿರತೆಯ ವಿಸ್ತಾರದ ಹುಬ್ಬುಗಳನು ಹೊಂದಿದ ಶ್ರೇಷ್ಠ ನಿರ್ಮಾಪಕರವರು,
ವಿಶ್ವದ ಭವ್ಯ ಅಡ್ಡಗೋಡೆಗಳನು ಮುರಿದು ಹಾಕುವವರು,
ಅದೃಷ್ಟದೊಡನೆ ಅದರ ಸಂಕಲ್ಪದ ಅಖಾಡದಲಿ ಕಾದುವ ಕುಸ್ತಿಪಟುಗಳವರು
ದೇವರುಗಳ ಬಂಡೆನೆಲದಲಿಹ ಶ್ರಮಿಕರವರು,
ಸಂಪರ್ಕಿಸಲು ಅಸಾಧ್ಯನಾದವನ ಸಂದೇಶವಾಹಕರು,
ಅಮರತ್ವ ರೂಪಿಸುವ ವಾಸ್ತುಶಿಲ್ಪಿಗಳು ...
...
ಅವರ ಪಾದಸ್ಪರ್ಶ ಒಂದು ದಿನ ಬದಲಿಸುವುದು ಖಿನ್ನ ಪೃಥ್ವಿಯನು
ಹಾಗೂ ಪ್ರಕೃತಿಯ ಮುಖದ ಮೇಲಿರುವ ಬೆಳಕಿಗೆ ಸಮರ್ಥನೆ ನೀಡುವುದು.
(**‘ಸಾವಿತ್ರಿ’** : p 343–44)

*



ಅತಿಮಾನಸದ ಪಕ್ಷಿ
ಅದು ಅವರೋಹಣ ಮಾಡಿದಲ್ಲಿ ಉಳಿದುಕೊಳ್ಳುವುದು.

*Botanical name:* Strelitia reginae, Bird of paradise, Crane flower

ಫೆಬ್ರವರಿ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | | | | | |
| | | | | | | |



ಜೀವನದ ಯಾತನೆಯ ಎದೆಬಡಿತವನು ಅವಳ ಪಾದಗಳಿಂದ ವಾಸಿಮಾಡಲೆಂದು
ಮನುಷ್ಯನ ಮಬ್ಬಾದ ಆತ್ಮದ ಮೇಲಿರುವ ಮುದ್ರೆಗಳನು ಮುರಿದು ಹಾಕಲೆಂದು
ಮತ್ತು ಅವಳ ಅಗ್ನಿಯನು ವಸ್ತು–ವಿಷಯಗಳ ಮುಚ್ಚಿದ ಹೃದಯದಲ್ಲಿ ಹೊತ್ತಿಸಲೆಂದು
ಎಲ್ಲ ಪ್ರಕೃತಿ ಮೂಕವಾಗಿ ಅವಳಿಗೆ ಮಾತ್ರ ಕರೆಕೊಡುತಿಹುದು,
ಇಲ್ಲಿರುವುದೆಲ್ಲ ಒಂದು ದಿನ ಅವಳ ಮಾಧುರ್ಯವಿರುವ ಮನೆಯಾಗುವುದು
ಎಲ್ಲ ವೈರುಧ್ಯಗಳು ಅವಳ ಸಾಮರಸ್ಯವನು ತಯಾರಿಸುವವು
ಆವಳತ್ತ ನಮ್ಮ ಜ್ಞಾನ ಮೇಲ್ಗಡೆ ಸಾಗುವುದು, ನಮ್ಮ ಭಾವೋದ್ರೇಕ ತಡವರಿಸುವುದು;
ಅವಳ ಅದ್ಭುತ ದಿವ್ಯಾನಂದದಲಿ ನಾವು ನೆಲೆಸುವೆವು
ನಮ್ಮ ನೋವನು ಅವಳ ಹಿಡಿತ ಪರಮ ಸುಖವನ್ನಾಗಿ ಮಾಡುವುದು.
ಅವಳಲ್ಲಿರುವ ಎಲ್ಲರ ಮೂಲಕ ನಮ್ಮಾತ್ಮ ಏಕೈಕ ಆತ್ಮವಾಗುವುದು,
ನಮ್ಮ ಜೀವನ ಅವಳಲಿ ಪರಿವರ್ತನೆಗೊಳಗಾದ ಕಾರಣದಿಂದ ದೃಢೀಕರಣವನು,
ಮೇಲ್ಗಡೆ ದೊರೆತ ನೆರವೇರಿಕೆಯ ಉತ್ತರವನು
ಕೆಳಗಡೆ ಸದ್ದಿರದ ಅಪಾರ ದಿವ್ಯಾನಂದವನು
ದೈವೀ ಅಪ್ಪುಗೆಯ ಅದ್ಭುತವನು ಕಂಡುಕೊಳ್ಳುವುದು.

(**'ಸಾವಿತ್ರಿ'** : p 314–15) – ಶ್ರೀ ಅರವಿಂದರು

*




ಭೌತಿಕದಲ್ಲಿ ಅತಿಮಾನಸ ಪ್ರಕಾಶಕ್ಕಾಗಿ ಅಭೀಪ್ಸೆ
ಗುಂಪಾಗಿರಿಸಿದ, ಪಟ್ಟು ಹಿಡಿಯುವ, ಹಟಮಾರಿ, ಸಂಘಟಿತ, ಕ್ರಮಬದ್ಧ.

*Botonical name:* Ixora javanica [Ixora singaporensis]

ಜನವರಿ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |
| | | | | | | |



ವೇದನೆಯ ಮೇರಿಕನ್ಯೆ(madonna)ಯೆ, ದೈವೀ ದುಃಖದ ಮಾತೆಯೆ,
ಜಗತ್ತಿನ ಅಸಹನೀಯ ದುಃಖ ಸಹಿಸಿಕೊಳ್ಳಲು
ನನ್ನಾತ್ಮ ಮುಂದಿರಿಸಿದ ಭಾಗ ನೀನಾಗಿರುವೆ.
ನೀನಿರುವುದರಿಂದಾಗಿ ಜನರು ತಮ್ಮ ವಿಧಿಗೆ ಶರಣಾಗದಿಹರು,
ಆದರೆ ಸಂತೋಷ ಕೊಡು ಎಂದು ಕೇಳುವರು, ವಿಧಿಯೊಡನೆ ಹೋರಾಡುವರು;
ನೀನಿರುವುದರಿಂದಾಗಿ ಹತಭಾಗ್ಯರು ಇನ್ನೂ ಭರವಸೆಯಿಂದಿರಬಲ್ಲರು.
ಆದರೆ ಸಾಂತ್ವನ ನೀಡುವುದಕಾಗಿ ನಿನ್ನ ಸಾಮರ್ಥ್ಯವಿದೆ, ರಕ್ಷಣೆಗಾಗಿ ಅಲ್ಲ.
ಬಲವನ್ನು ತರುವ ನಾನು ಒಂದು ದಿನ ಮರಳಿ ಬರುವೆ,
ಸನಾತನನ ಬಟ್ಟಲಿನಿಂದ ನೀ ಕುಡಿಯುವ ಹಾಗೆ ಮಾಡುವೆ,
ಅವನ ಶಕ್ತಿಯ ಪ್ರವಾಹಗಳು ನಿನ್ನ ಅಂಗಗಳಲಿ ಜಯ ಪಡೆಯುವವು,
ವಿವೇಕದ ಸ್ಥಿರತೆ ನಿನ್ನ ಹೃದಯದ ಭಾವೋದ್ರೇಕವನು ನಿಯಂತ್ರಿಸುವುದು.
ನಿನ್ನ ಪ್ರೇಮ ಮನುಕುಲವನು ಬಂಧಿಸಿಡುವುದು,
ನಿನ್ನ ಕರುಣೆ ಪ್ರಕೃತಿಯ ಕ್ರಿಯೆಗಳ ಉಜ್ವಲ ಬೀಗದ ಕೈಯಾಗುವುದು:
ದುಃಖ ಕೊನೆಗೊಂಡು ಪೃಥ್ವಿಯಾಚೆ ಸಾಗಿ ಹೋಗುವುದು,
ಪಶುವಿನ ಕ್ರೋಧದಿಂದ, ದೈತ್ಯನ ಕ್ರೌರ್ಯ ಹಾಗೂ ಅವನ ನೋವಿನಿಂದ
ಜಗತ್ತು ಮುಕ್ತವಾಗುವುದು, ಎಂದೆಂದಿಗೂ ಹೆಚ್ಚುತ್ತಿರುವ
ಶಾಂತಿ ಸಂತೋಷಗಳು ಅಲ್ಲಿರುವವು.

(**'ಸಾವಿತ್ರಿ'** : p 507–08) – ಶ್ರೀ ಅರವಿಂದರು

*



ಅತಿಮಾನಸ ಸಂಪತ್ತುಗಳು
ಅತಿಮಾನಸ ಸತ್ತೆಯ ವಿನಿಯೋಗಕ್ಕಾಗಿ ಇರುವಂತಹವುಗಳು ಮತ್ತು ಮನುಷ್ಯನಿಗೆ ಅಪರಿಚಿತವಾದವುಗಳು.

*Botonical name:* Selenicereus

ಏಪ್ರಿಲ್ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| | | | | | | |



ಅಧಿಕ ಬಲದ ಮೇರಿ ಕನ್ಯೆಯೆ, ಕ್ರಿಯೆ ಹಾಗೂ ಶಕ್ತಿಗಳ ಮಾತೆಯೆ, ...

ಪ್ರಕಾಶವನು ತರುವ ನಾನು ಒಂದು ದಿನ ಮರಳಿ ಬರುವೆ;
ಆಗ ನಾನು ನಿನಗೆ ದೇವನ ಕನ್ನಡಿಯ ಕೊಡುವೆ;
ಆತ್ಮವನು ಜಗತ್ತನು ಅವನು ನೋಡುವ ಹಾಗೆ ನೀನು
ನಿನ್ನಾತ್ಮದ ಉಜ್ವಲ ಹೊಂಡದಲಿ ಅವು ಪ್ರತಿಫಲಿತವಾದುದನು ನೋಡುವಿ.
ನಿನ್ನ ಸಾಮರ್ಥ್ಯದ ಹಾಗೆ ನಿನ್ನ ವಿವೇಕ ವಿಶಾಲವಾಗುವುದು.
ನಂತರ ದ್ವೇಷ ವಾಸ ಮಾಡಲಾರದು ಮಾನವ ಹೃದಯಗಳಲಿ,
ಭಯ ದೌರ್ಬಲ್ಯ ತೊರೆದು ಹೋಗುವವು ಮಾನವರ ಜೀವನದಿಂದ,
ಜಗತ್ತು ತನ್ನ ಆಹಾರ ಎಂದು ಹಕ್ಕು ಸಾಧಿಸುವ ಸಿಂಹ ಗರ್ಜನೆಯಂತಿರುವ
ಅಹಂಕಾರದ ಕೂಗು ಅಂತರಂಗದಲಿ ಮೌನದಿಂದುಳಿದುಕೊಳ್ಳುವುದು.
ಎಲ್ಲವೂ ಅಧಿಕ ಬಲ, ದಿವ್ಯಾನಂದ ಹಾಗೂ ಸಂತೋಷಗಳಿರುವ ಶಕ್ತಿಯಾಗುವುದು.

(**'ಸಾವಿತ್ರಿ'** : p 513–14) – ಶ್ರೀ ಅರವಿಂದರು

*



ಪೂರ್ತಿ ಅತಿಮಾನಸ ಪ್ರಕಾಶದಲ್ಲಿ ಪ್ರಜ್ಞೆಯ ಗಾಢತೆ
ಜಗತ್ತನ್ನು ಪ್ರಕಾಶಿಸುವುದಕ್ಕಾಗಿ ತೇಜೋಮಯ ಹಾಗೂ ಹೊಳಪುಳ್ಳದ್ದಾಗಿದೆ.

*Botonical name:* Helianthus, Common name: Sunflower

ಮೇ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |
| | | | | | | |



ಪ್ರಕಾಶದ ಮೇರಿಕನ್ಯೆಯೆ, ಸಂತೋಷ ಶಾಂತಿಗಳ ಮಾತೆಯೆ, ...

ನೀನಿರುವುದರಿಂದಾಗಿ ಆತ್ಮ ದೇವನ ಸಮೀಪ ಸಾಗುತಿದೆ,
ನೀನಿರುವುದರಿಂದಾಗಿ ದ್ವೇಷವಿದ್ದಾಗಲೂ ಪ್ರೇಮ ಬೆಳೆಯುತಿದೆ,
ನಿಶೆಯ ಗುಂಡಿಯಲಿ ಹತ್ಯೆಗೀಡಾಗದೆ ಜ್ಞಾನ ನಡೆದಾಡುತಿದೆ ...

ನೀನು ಅಂತರ್ಬೋಧೆಯ ಕಿರಣಗಳ ಮಳೆಗರೆದಾಗಲೂ ಕೂಡ,
ಮಾನವ ಮನಸ್ಸು ಅದು ಪೃಥ್ವಿಯದೇ ಮಿನುಗು ಎಂದು ಯೋಚಿಸುವುದು,
ಅವನ ಆತ್ಮ ಆಧ್ಯಾತ್ಮಿಕ ಅಹಂಕಾರದಿಂದ ಮುಳುಗಿ ಹೋಗುವುದು,
ಇಲ್ಲವೆ ಅವನಾತ್ಮದ ಕನಸು ದೇವನ ಉಜ್ವಲ ಛಾಯೆ ಮಾತ್ರ ಬರಬಹುದಾದ
ಸಂತಸ್ಥಿತಿಯ ಉಜ್ವಲ ಕಿರುಕೊಠಡಿಯಲಿ ಮುಚ್ಚಿಹಾಕಿಕೊಂಡಿಹುದು.
ಸನಾತನನಿಗಾಗಿರುವ ಅವನ ಹಂಬಲವನು ನೀನು ಪೋಷಿಸಬೇಕು
ಹಾಗೂ ಅವನ ಹಾತೊರೆಯುವ ಹೃದಯವನು ಸ್ವರ್ಗದ ಅಗ್ನಿಯಿಂದ ತುಂಬಬೇಕು,
ದೇವನನು ಅವನ ದೇಹ ಹಾಗೂ ಪ್ರಾಣಗಳಲಿ ಕೆಳಗೆ ತರಬೇಕು,
ಒಂದು ದಿನ ನಾನು ದೇವನ ಕೈಯನು ನನ್ನ ಕೈಯಲ್ಲಿರಿಸಿಕೊಂಡು ಮರಳಿ ಬರುವೆ.
ನೀನು ಪರಿಪೂರ್ಣನಾದವನ ಮುಖವನು ನೋಡಲಿರುವಿ.
ಆಗ ಪವಿತ್ರ ಮದುವೆಯನು ಸಿದ್ಧಿಸಿಕೊಂಡಂತಾಗುವುದು
ಆಗ ದೈವೀ ಕುಟುಂಬ ಜನ್ಮ ತಾಳುವುದು.
ಎಲ್ಲ ಜಗತ್ತುಗಳಲಿ ಪ್ರಕಾಶ ಹಾಗೂ ಶಾಂತಿ ತುಂಬಿಕೊಳ್ಳುವವು.

(**‘ಸಾವಿತ್ರಿ’** : p 520) – ಶ್ರೀ ಅರವಿಂದರು

*



ಅತಿಮಾನಸ ಸೂರ್ಯ
ಅದರ ಕಿರಣಗಳು ನಮ್ಮಲ್ಲಿ ಜ್ಞಾನೋದಯ ಉಂಟುಮಾಡಲಿ, ನಮ್ಮನ್ನು
ಪರಿವರ್ತಿಸಲಿ ಎಂದು ಅಭೀಪ್ಸೆ ಪಡುತ್ತೇವೆ.

*Botonical name:* Anthocephalus cadamba *Common name:* Kadam tree

**ಜೂನ್ 2016**

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |
| | | | | | | |



ದೇವನ ಆಚೆಗಿರುವುದರಲಿ ಇನ್ನೂ ಹೆಚ್ಚಿನದು ಬಚ್ಚಿಟ್ಟುಕೊಂಡಿಹುದು
ಒಂದು ದಿನ ಅದು ತನ್ನ ಅಡಗಿದ ಮುಖವನು ತೆರೆದು ತೋರಿಸುವುದು ...

ಅವನ ದಣಿವರಿಯದ ಏರಿ ಹೋಗುವಿಕೆ ಮನಸ್ಸಿನತ್ತವಷ್ಟೇ ಎಲ್ಲವೂ ಅಲ್ಲ.
ಜಗತ್ತುಗಳ ಶಿಖರದ ಮೇಲೆ ಅಗ್ನಿಯೊಂದಿಹುದಲ್ಲಿ,
ಸನಾತನನ ಪ್ರಕಾಶದ ಮನೆಯೊಂದಿಹುದಲ್ಲಿ
ಅನಂತ ಸತ್ಯ, ಪರಿಪೂರ್ಣ ಸಾಮರ್ಥ್ಯವೊಂದು ಇರುವವಲ್ಲಿ.
ದಿವ್ಯಾತ್ಮದ ಅಧಿಕ ಬಲ ಚೆಲ್ಲಿಕೊಡುವುದು ತನ್ನ ಮುಖವಾಡವನು
ಅದರ ಶ್ರೇಷ್ಠತೆಯ ಭಾವನೆ ಬರುವುದು ಜಗತ್ತಿನ ಮುನ್ನಡೆಗೆ ಆಕಾರ ಕೊಡುವುದರಲಿ:
ಪರದೆ ಮುಚ್ಚಿರದ ಬೆಳಕಿನ ಕಿರಣಗಳಲಿ ಅದನ್ನು ನೋಡಲಾಗುವುದು
ಅದು ಅಚೇತನದ ನಿಶೆಯಿಂದ ಮೇಲಕ್ಕೇರುತ್ತಿರುವ ತಾರೆಯೊಂದಿದ್ದ ಹಾಗಿಹುದು,
ಪರಾಪ್ರಕೃತಿಯ ತುದಿಯತ್ತ ಏರುತ್ತಿರುವ ಸೂರ್ಯನೊಬ್ಬನ ಹಾಗಿಹುದು. ...

ಅತಿಕಡಿಮೆ ಜನ ಅದ್ಭುತ ದೈವೀ ಮೂಲದ ಮಿನುಗು ನೋಟವನು ನೋಡುವರು
ನಿನ್ನಲ್ಲಿ ರಹಸ್ಯ ದೈವೀಶಕ್ತಿಯಿರುವುದನು ಕೆಲವರು ಭಾವನೆಗೆ ತಂದುಕೊಳ್ಳುವರು
ಅಧಿಕ ಬಲವಿರುವ ದೈವೀ ದಿನವೊಂದರಂದು ಸಾಹಸಿಗರು
ಹೆಸರಿರದ ಹೆಜ್ಜೆಯೊಂದನು ಭೇಟಿ ಮಾಡಲು ಹೊರಳಿಕೊಳ್ಳುವರು.
ಸೀಮಿತಗೊಳಿಸುವ ಮನಸ್ಸಿನ ಹೊರಗೆ ಆರೋಹಣ ಮಾಡುತ್ತ,
ಅವರು ಜಗತ್ತಿನ ಭವ್ಯ ಚಿತ್ರಣವನು ಶೋಧಿಸುವರು
ಹಾಗೂ ದೈವಿಕವಾದ ಸತ್ಯ, ಸರಿಯಾಗಿರುವಿಕೆ ಹಾಗೂ ವೈಶಾಲ್ಯಗಳಲ್ಲಿ ಹೆಜ್ಜೆ ಇರಿಸುವರು.

(**'ಸಾವಿತ್ರಿ'** : p 704) – ಶ್ರೀ ಅರವಿಂದರು

*



ಭಗವಂತನಿಗೆ ಅತಿಮಾನಸ ರೀತಿಯಲ್ಲಿ ಅಂಟಿಕೊಳ್ಳುವಿಕೆ
ಬಹುರೂಪಿ ಮತ್ತು ಹಸನ್ಮುಖಿ, ಕೊನೆರಹಿತವಾಗಿ ಪುನರಾವರ್ತಿಸುವಂತಹದು.

*Botonical name:* Botonical Rosa 'Father's Day', Rose

ಜುಲೈ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |




ತನ್ನ ಲಯಬದ್ಧ ಮಂತ್ರಪಠಣದಲ್ಲಿರುವಾಗ ಸ್ವರ್ಗೀಯ ದಾರ್ಶನಿಕ
ಜನರ ನಿರಂತರ ಶ್ರಮ ಕುರಿತು, ಪೃಥ್ವಿಗಾಗಿ ದೇವರುಗಳ ಹೆಣಗಾಟ ಕುರಿತು
ನೋವಿನ ರಹಸ್ಯ ಹಾಗೂ ಅದ್ಭುತ ಇವುಗಳ ಹಿಂದಿರುವ ಸಂತೋಷ ಕುರಿತು ಹೇಳಿದ್ದ.
ಪ್ರೇಮದ ಕಮಲ–ಹೃದಯ ಕುರಿತು ಅವರಿಗೆ ಅವನು ಹಾಡಿ ಹೇಳಿದ್ದ,
ಆ ಕಮಲ ತನ್ನ ಸಾವಿರಾರು ಪ್ರಕಾಶಮಯ ಮೊಗ್ಗೆಗಳೊಡನೆ
ತೋರಿಕೆಯ ವಸ್ತು–ವಿಷಯಗಳ ಹಿಂದೆ ಕಂಪಿಸುತ್ತ ನಿದ್ರಿಸುತಿಹುದು.
ಪ್ರತಿಯೊಂದು ಸ್ಪರ್ಶದಿಂದ ಅದು ನಡುಗುವುದು, ಎಚ್ಚತ್ತುಕೊಳ್ಳಲು ಹೆಣಗುವುದು
ಮತ್ತು ಒಂದು ದಿನ ದಿವ್ಯಾನಂದವಿರುವ ಧ್ವನಿಯ ಕೇಳುವುದು
ಅವಳು* ಶೋಧಿಸಿದ ಪ್ರಭು ಅವಳ ಕೈಹಿಡಿದಾಗ
ಆ ಕಮಲ ಆ ಪ್ರಭುವಿನ ತೋಟದಲಿ ಅರಳುವುದು.
ಅಧಿಕ ಬಲದಿಂದ ನಡುಗುತ್ತಿರುವ ದಿವ್ಯಾನಂದದ ಸುರುಳಿ
ವಿಶ್ವದ ಆಳದಲ್ಲಿರುವ ಹೃದಯದಾದ್ಯಂತ ನುಸುಳುತ್ತ ಸಾಗಿಹುದು.
ಅವಳ ಭೌತದ್ರವ್ಯದ ಜಡತೆಯಿಂದ, ಅವಳ ಮನಸ್ಸಿನ ಕನಸುಗಳಿಂದ
ಅವಳು ಎಚ್ಚತ್ತುಕೊಂಡಳು ಪರದೆಯ ಹಿಂದಿರದ ದೇವನ ಮುಖವ ನೋಡಿದಳು.

(**'ಸಾವಿತ್ರಿ'** : p 417–18) – ಶ್ರೀ ಅರವಿಂದರು

*

* ಅವಳು – ಪೃಥ್ವಿ



ಅತಿಮಾನಸ ಪ್ರಜ್ಞೆ
ವೈಭವೋಪೇತವಾಗಿ ಎಚ್ಚತ್ತುಕೊಂಡದ್ದು ಹಾಗೂ ಬಲವತ್ತರವಾದದ್ದು, ಪ್ರಕಾಶಮಯವಾದದ್ದು ತನ್ನ ಬಗ್ಗೆ ನಿಶ್ಚಿತತೆ ಹೊಂದಿರುವಂತಹದು ಅದರ ಚಲನೆಗಳಲ್ಲಿ ದೋಷಾತೀತವಾದದ್ದು.

*Botonical name:* Hibiscus rosa-sinensis

ಆಗಸ್ಟ್ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |
| | | | | | | |



ಈ ಜಗತ್ತಿಗೆ ಆಕಾರ ನೀಡಿದವನು ಎಂದೆಂದಿಗೂ ಅದರ ಪ್ರಭುವಾಗಿಹನು:
ಮಾರ್ಗದ ಮೇಲೆ ನಮ್ಮ ದೋಷಗಳು ಅವನ ಹೆಜ್ಜೆಗಳು;
ಅವನು ನಮ್ಮ ಜೀವನಗಳ ಭೀಕರ ವಿಪರ್ಯಯಗಳ ಮೂಲಕ ಕಾರ್ಯಕೈಕೊಳ್ಳುವನು,
ಅವನು ಸಮರ ಹಾಗೂ ಶ್ರಮ ಇವುಗಳ ಕಠಿಣ ಉಸಿರಿನ ಮೂಲಕ
ಕಾರ್ಯಕೈಕೊಳ್ಳುವನು,
ಅವನು ನಮ್ಮ ಪಾಪಗಳು, ಅಳಲುಗಳು ಹಾಗೂ ಕಣ್ಣೀರುಗಳು ಇವುಗಳ
ಮೂಲಕ ಕಾರ್ಯಕೈಕೊಳ್ಳುವನು,
ಅವನ ಜ್ಞಾನ ನಮ್ಮ ಅಜ್ಞಾನವನು ಅಧಿಕಾರ ಬಲದಿಂದ ತಳ್ಳಿಹಾಕುವುದು,
ನಾವು ಸಹಿಸಬೇಕಾದ ತೋರಿಕೆ ಏನೇ ಆಗಿರಲಿ,
ನಮ್ಮ ಬಲವತ್ತರವಾದ ಅನಿಷ್ಟಗಳು ಮತ್ತು ಸದ್ಯದ ವಿಧಿ ಏನೇ ಆಗಿರಲಿ,
ಪಥಚ್ಯುತಿ ಮತ್ತು ಬೇಗುದಿಗಳ ಹೊರತಾಗಿ ಬೇರೇನನ್ನೂ ನೋಡದಂತಾಗಿರಲಿ
ಈ ಎಲ್ಲದರಾದ್ಯಂತ ಅಧಿಕ ಬಲವಿರುವ ಮಾರ್ಗದರ್ಶಕ ನಮ್ಮನು ಇನ್ನೂ
ಕರೆದೊಯ್ಯುವನು.
ಈ ಭವ್ಯ ವಿಭಜಿತ ಜಗತ್ತಿಗೆ ನಾವು ಸೇವೆ ಸಲ್ಲಿಸಿದ ನಂತರ
ದೇವನ ದಿವ್ಯಾನಂದ, ಅವನೊಡನೆ ಏಕತೆ ಇವು ನಮ್ಮ ಅಂತರ್ಜಾತ ಹಕ್ಕುಗಳಾಗುವವು.
ದೈವೀ ಅಜ್ಞಾತವಾದವನ ಪಂಚಾಂಗದಲಿ ಒಂದು ದಿನಾಂಕವನು
ನಿರ್ದಿಷ್ಟಪಡಿಸಲಾಗುವುದು,
ಅದು ಘನತೆವೆತ್ತ ದೈವೀ ಜನ್ಮದ ವಾರ್ಷಿಕ ದಿನ:
ನಮ್ಮಾತ್ಮ ಅದರ ಏರುಪೇರಿನ ನಡೆದಾಟವನು ಸಮರ್ಥಿಸಿಕೊಳ್ಳುವುದು,
ಈಗ ನಿಷ್ಪ್ರಯೋಜಕ ಇಲ್ಲವೆ ದೂರವಿರುವುದೆಲ್ಲ ಹತ್ತಿರ ಬರುವುದು.
ಕೊನೆಗೆ ಈ ಸ್ಥಿರ ಹಾಗೂ ದೂರದ ಅಧಿಕ ಬಲಗಳು ಕಾರ್ಯಕೈಕೊಳ್ಳುವವು.

(**'ಸಾವಿತ್ರಿ'** : p 59) – ಶ್ರೀ ಅರವಿಂದರು

*



ಅತಿಮಾನಸ ಪ್ರೇಮದ ಸೌಂದರ್ಯ (ಅರೋವಿಲೆಯ ಹೂವು)
ಅದು ತನ್ನ ಎತ್ತರದಲ್ಲಿ ಜೀವಿಸಲು ನಮ್ಮನ್ನು ಆಹ್ವಾನಿಸುತ್ತದೆ.

*Botonical name:* Hibiscus rosa-sinensis

ಜನವರಿ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 25 | 27 | 28 | 29 | 30 | |
| | | | | | | |



ಒಂದು ದಿನ ದೈವೀ ಮುಖ ಮುಖವಾಡದಾದ್ಯಂತ ಉರಿದು ಹೋಗಬೇಕು.
ನಮ್ಮ ಅಜ್ಞಾನ ವಿವೇಕದ ಸಂಧಿಕಾಲವಾಗಿಹುದು,
ನಮ್ಮ ದೋಷ ತನ್ನ ಮಾರ್ಗದಲಿ ಹೊಸ ಜ್ಞಾನದೊಂದಿಗೆ ಮದುವೆ
ಮಾಡಿಕೊಳ್ಳುವುದು,
ಅದರ ಅಂಧಕಾರ ಪ್ರಕಾಶದಲಿರುವ ಕಪ್ಪಾಗಿರಿಸಿದ ಗಂಟು,
ಸೂರ್ಯನತ್ತ ಸುರುಳಿ ಸುತ್ತಿಕೊಂಡು ಹೋಗುವ ಮಬ್ಬಾದ ಮಾರ್ಗದಲಿ
ಯೋಚನೆ ಅಜ್ಞಾನದೊಂದಿಗೆ ಕೈಯಲ್ಲಿ ಕೈಯನ್ನಿರಿಸಿ ಕುಣಿಯುತಿಹುದು. ...

ಅನಂತತೆಗಳೊಳಗಿಂದ ಅಗ್ನಿಯೊಂದು ಹೊರಬರುವುದು,
ಆತ್ಮದ ವಸ್ತು–ವಿಷಯಗಳ ಆಳಾತಿ ಆಳದ ಹೃದಯಕ್ಕೆ ಜ್ಞಾನೋದಯ
ಉಂಟುಮಾಡಲೆಂದು
ನಿಶ್ಚಲ, ಮಗ್ನನಾಗಿರುವ ಏಕಾಕಿಯಾದವನಿಂದ ಪ್ರಕಾಶಿತ ಸಾಗರಗಳ ಮೇಲೆ
ದೂರದಲ್ಲಿರುವ ಸರ್ವಜ್ಞತೆಯ ಏನೋ ಒಂದು ದಾಟಿಕೊಂಡು ಬಂದ
ಶ್ರೇಷ್ಠತರ ಆಧ್ಯಾತ್ಮ ರಹಸ್ಯ ಜ್ಞಾನ ಜಗತ್ತನು ಪರಿಗಣಿಸುವುದು.
ಅದು ದೈವೀ ಮನಸ್ಸಿಗೆ ಕಾಲಾತೀತ ಜ್ಞಾನವನು, ಜೀವನಕ್ಕೆ ಅದರ ಗುರಿಯನು,
ಅವಿದ್ಯೆಗೆ ಅದರ ಕೊನೆಯನು ತಂದುಕೊಡುವುದು.

(**'ಸಾವಿತ್ರಿ'** : p 258) – ಶ್ರೀ ಅರವಿಂದರು

*




ಅತಿಮಾನಸ ಕಾರ್ಯದಲ್ಲಿ ಯಶಸ್ಸು
ತಾಳ್ಮೆಯಿರುವ ಶ್ರಮ ಮತ್ತು ಪರಿಪೂರ್ಣ ಮುಡಿಪಾಗಿರಿಸುವಿಕೆ ಇವುಗಳ ಪರಿಣಾಮ.

*Botonical name:* Cochlospermum religiosum, Silk-cotton tree

ಜನವರಿ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |



ಓಹ್, ನಮ್ಮ ಕೂಗನು ಕೇಳಿ ಅವನು ಒಂದು ದಿನ ನಿಶ್ಚಿತವಾಗಿ ಬರಲಿರುವ,
ಒಂದು ದಿನ ನಮ್ಮ ಜೀವನವನು ಹೊಸದಾಗಿ ಸೃಷ್ಟಿಸಲಿರುವ,
ಹಾಗೂ ಶಾಂತಿಯ ಮಾಂತ್ರಿಕ ಸೂತ್ರವನು ಉಚ್ಚರಿಸಲಿರುವ,
ವಸ್ತು–ವಿಷಯಗಳ ಯೋಜನೆಗೆ ಪರಿಪೂರ್ಣತೆಯನು ತರಲಿರುವ.
ಸನಾತನ ದ್ವಾರಗಳ ರಹಸ್ಯವನು ಬಿಟ್ಟುಕೊಟ್ಟು
ಸಹಾಯಕ್ಕಾಗಿ ಕೂಗುತ್ತಿರುವ ಜಗತ್ತಿನೊಳಗೆ
ಒಂದು ದಿನ ಅವನು ಜೀವನ ಹಾಗೂ ಪೃಥ್ವಿಗಳೆಡೆಗೆ ಇಳಿದು ಬರಲಿರುವ,
ಆತ್ಮವನು ಮುಕ್ತಗೊಳಿಸುವ ಸತ್ಯವನು,
ಆತ್ಮದ ಶುದ್ಧ ಸ್ನಾನದಂದಿರುವ ಸಂತೋಷವನು,
ದೈವೀ ಪ್ರೇಮದ ಹೊರಚಾಚಿದ ತೋಳಿನಂತಿರುವ ಬಲವನು ಅವನು ತರಲಿರುವನು.
ಒಂದು ದಿನ ತನ್ನ ಸೌಂದರ್ಯದ ಭಯಾನಕ ಪರದೆಯನು ಎತ್ತಿಡಲಿರುವನು,
ಜಗತ್ತಿನ ಬಡಿದುಕೊಳ್ಳುವ ಹೃದಯದ ಮೇಲೆ ದಿವ್ಯಾನಂದವನು ಹೇರಲಿರುವನು,
ಪ್ರಕಾಶ ದಿವ್ಯಾನಂದಗಳಿರುವ ತನ್ನ ರಹಸ್ಯ ದೇಹವನು ತೆರೆದಿರಿಸಲಿರುವನು.

(**'ಸಾವಿತ್ರಿ'** : p 200) – ಶ್ರೀ ಅರವಿಂದರು

*



ಪೃಥ್ವಿಯ ಮೇಲೆ ಅತಿಮಾನಸ ಅಮರತ್ವ
ಇದನ್ನು ಇನ್ನೂ ಸಿದ್ಧಿಸಿಕೊಳ್ಳಬೇಕಾಗಿದೆ.

*Botonical name:* Helichrysum bracteatum

## ನವೆಂಬರ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |
| | | | | | | |



ಒಂದು ದಿನ ನನ್ನ ಶ್ರೇಷ್ಠ ಮಧುರ ಜಗತ್ತನ್ನು ನೋಡುವೆ
ದೇವತೆಗಳ ಭೀತಿಕಾರಕ ಮುಸುಕುಗಳನ್ನು ದೂರವಿರಿಸುವೆ,
ಪಾಪದ ಉಡುಪು ಕಳಚಿಕೊಳ್ಳುವೆ, ಭೀತಿಯ ಪರದೆ ಸರಿಸುವೆ,
ಸಮಾಧಾನಗೊಂಡ ನಾವು ನಮ್ಮ ಮಾತೆಯ ಮುಖದ ಸಮೀಪ ಸಾಗುವೆವು,
ನಮ್ಮ ಬಿಚ್ಚುಮನದ ಆತ್ಮಗಳನು ಅವಳ ತೊಡೆಯ ಮೇಲೆ ಚೆಲ್ಲಿಕೊಡುವೆವು;
ಆಗ ನಾವು ಬೆಂಬತ್ತಿರುವ ದಿವ್ಯಾನಂದವನು ಹಿಡಿದುಕೊಳ್ಳುವೆವು
ದೀರ್ಘ ಕಾಲದಿಂದ ಅರಸುತ್ತಿರುವ ದೇವನೊಂದಿಗೆ ಕಂಪಿಸುವೆವು,
ಸ್ವರ್ಗದ ಅನಿರೀಕ್ಷಿತ ಎಳೆತವನು ನಾವು ಕಂಡುಕೊಳ್ಳುವೆವು.
ಪರಿಶುದ್ಧ ದೇವ ಪ್ರಮುಖರಿಗೆ ಮಾತ್ರ ಭರವಸೆ ಇರುತ್ತದೆಯಷ್ಟೇ ಅಲ್ಲ
ಶ್ವೇತ ದೇವತೆಗಳು ತಪ್ಪಿಸಿಕೊಂಡುದುದನು ಕಂಡುಕೊಳ್ಳಲು ಏಕೈಕ ಎದೆಯಿಂದ
ಕೆಳಗೆ ಕೋಪದಿಂದ ನೆಗೆದು ಬಂದ ಹಿಂಸಾತ್ಮಕ ಅಂಧಕಾರಕ್ಕೀಡಾದ
ದೇವತೆಗಳಿಗೂ ಕೂಡ
ಭರವಸೆ ಉಂಟು, ಅವರೂ ಕೂಡ ಸುರಕ್ಷಿತರು;
ಮಾತೆಯೊಬ್ಬಳ ಕಣ್ಣು ಅವರ ಮೇಲೆ ನೆಟ್ಟಿರುವವು, ಪ್ರೇಮದಿಂದ
ಚಾಚಿಕೊಂಡ ಅವಳ ತೋಳುಗಳು ಬಂಡಾಯದ ತನ್ನ ಮಕ್ಕಳನ್ನು ಬಯಸುವವು.

(**'ಸಾವಿತ್ರಿ'** : p 613) – ಶ್ರೀ ಅರವಿಂದರು

*



ಅತಿಮಾನಸ ಕ್ರಿಯೆ
ಪ್ರತ್ಯೇಕವಾಗಿರದ ಆದರೆ ಇಡಿಯಾದ ಒಂದು ಕಾರ್ಯ

*Botonical name:* Barringtonia asiatica

ಡಿಸೆಂಬರ್ 2016

| ರವಿ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |
| | | | | | | |



ಮೃತ್ಯು, ಸ್ವಲ್ಪಕಾಲ ಜೀವಿಸಿರು, ಇನ್ನೂ ನನ್ನ ಉಪಕರಣವಾಗು,
ಒಂದು ದಿನ ಮನುಷ್ಯ ಕೂಡ ನಿನ್ನ ಆಳವರಿಯದ ನಿಶ್ಚಲನೀರವತೆಯಲ್ಲಿರುವ
ಹೃದಯವನು, ದೈವೀ ನಿಶೆ ಚಿಂತಿಸುವ ಶಾಂತಿಯನು
ಸನಾತನನ ನಿಯಮಕ್ಕೆ ಗುರುತರ ವಿಧೇಯತೆಯನು
ಹಾಗೂ ನಿನ್ನ ನೆಟ್ಟನೋಟದಲ್ಲಿರುವ ಸ್ಥಿರ ಅನಮ್ಯ ಮರುಕವನು ಅರಿತುಕೊಳ್ಳುವನು.
ಆದರೆ ಈಗ ಓ, ಕಾಲಾತೀತ ಅಧಿಕ ಬಲವೆ, ಬದಿಗೆ ಸರಿದು ನಿಂತುಕೋ
ಅವತಾರ ತಾಳಿದ ನನ್ನ ದೈವೀಶಕ್ತಿಯ ಮಾರ್ಗವನು ಬಿಟ್ಟುಕೊಡು.
ತೇಜಃಪೂರ್ಣ ದೇವನನು ನಿನ್ನ ಕಪ್ಪು ಮುಖವಾಡದಿಂದ ಬಿಡುಗಡೆ ಮಾಡು:
ಸತ್ಯವಾನನೆಂದು ಕರೆಯಲಾದ ಜಗತ್ತಿನ ಆತ್ಮದ ವಿಮೋಚನೆ ಮಾಡು
ದೇವನ ಮನೆಯಲ್ಲಿ ಮನುಷ್ಯನ ಪ್ರತಿನಿಧಿಯಾದ ಅವನು
ವಿವೇಕದ ಮಿತ್ರ, ಪ್ರಕಾಶದ ಗಂಡನಾದ ಅವನು
ಸನಾತನ ವಧುವಿನ ಸನಾತನ ವರನಾದ ಅವನು
ನೋವು ಅಜ್ಞಾನಗಳಿರುವ ನಿನ್ನ ಹಿಡಿತದಿಂದ ಮುಕ್ತನಾಗಿ
ಜೀವನ ಹಾಗೂ ವಿಧಿ ಇವುಗಳ ಪ್ರಭುವಾಗಿ ನಿಲ್ಲುವಂತಾಗಲಿ.

(**'ಸಾವಿತ್ರಿ'** : p 666) – ಶ್ರೀ ಅರವಿಂದರು

*



**ಪ್ರಶ್ನೆ :** ಮುಂಬಯಿ ನಗರದಲ್ಲಿರುವ ನಾನು ಕುಳಿತುಕೊಂಡು ಏಕಾಗ್ರತೆಯಲ್ಲಿರಲು ಪ್ರಯತ್ನಿಸುತ್ತಿದ್ದೇನೆ, ಆದರೆ ಶ್ರೀಮಾತೆಯವರಿಗೆ ಪ್ರಣಾಮಗಳನ್ನು ಸಲ್ಲಿಸುವುದರ ಹೊರತಾಗಿ ನಾನು ಬೇರೆ ಏನನ್ನೂ ಕೈಕೊಳ್ಳಲು ಶಕ್ತನಾಗುತ್ತಿಲ್ಲ. ನಾನು ಸರಿಯಾಗಿ ಮುಂದುವರಿಯುತ್ತಿದ್ದೇನೆಯೆ?

**ಶ್ರೀ ಅ :** ಈ ಪ್ರಶ್ನೆ ಕೇಳಿದವನಿಗೆ ಅವನು ಬಹಳ ಸರಿಯಾದುದನ್ನೇ ಕೈಕೊಳ್ಳುತ್ತಿದ್ದಾನೆ ಎಂದು ಬರೆದು ತಿಳಿಸಬೇಕು. ಪ್ರಣಾಮ ಮಾಡುತ್ತಿರುವಾಗ ಅವನು ಶ್ರೀಮಾತೆಯವರ ಪ್ರಭಾವಕ್ಕೆ ಹಾಗೂ ಅವರು ಅವನಲ್ಲಿ ಕೈಕೊಳ್ಳುತ್ತಿರುವ ಕಾರ್ಯಗತಿಗಳಿಗೆ ತೆರೆದಿರಿಸಿಕೊಳ್ಳಲು ಅಭೀಪ್ಸೆ ಪಡಬೇಕು ಮತ್ತು ಅವರ ಕಾರ್ಯಗತಿಗಳ ಬಗ್ಗೆ ಅರಿವುಳ್ಳವನಾಗಿರಬೇಕು.

(**CWSA,** 32/566–67)

*

## ದರ್ಶನ ದಿನಗಳಂದು

ಶ್ರೀ ಅರವಿಂದರು ದರ್ಶನ ಕೊಡುತ್ತಿದ್ದ ದಿನಗಳಲ್ಲಿ, ಅದನ್ನು ಕೊಡುವ ಮೊದಲು, ಯಾವಾಗಲೂ, ಕೆಲವು ಶಕ್ತಿಗಳನ್ನು ಕುರಿತು ಏಕಾಗ್ರತೆ ಇಲ್ಲವೆ ಒಂದು ಬಗೆಯ ಸಿದ್ಧಿ ಇರುತ್ತಿತ್ತು, ಅದನ್ನು ಅವರು ಜನರಿಗೆ ಕೊಡಲು ಬಯಸುತ್ತಿದ್ದರು. ಮತ್ತು ಹಾಗಾಗಿ ಪ್ರತಿಯೊಂದು ದರ್ಶನ ಮುನ್ನಡೆಯ ಒಂದು ಹಂತವನ್ನು ಗುರುತಿಸುತ್ತಿತ್ತು, ಪ್ರತಿಯೊಂದು ಸಲ ಏನೋ ಒಂದನ್ನು ಅಧಿಕವಾಗಿ ಸೇರಿಸಲಾಗುತ್ತಿತ್ತು. ಆದರೆ ಅದು ದರ್ಶನಾಕಾಂಕ್ಷಿಗಳ ಸಂಖ್ಯೆ ಬಹಳ ಸೀಮಿತವಾಗಿದ್ದಾಗ ಆಗುತ್ತಿದ್ದಂತಹದು, ಅದನ್ನು ಬೇರೆ ರೀತಿಯಲ್ಲಿ ಸಂಘಟಿಸಲಾಗುತ್ತಿತ್ತು, ಮತ್ತು ಅದು ಅವಶ್ಯವಾದ ತಯಾರಿಯ ಒಂದು ಭಾಗವಾಗಿತ್ತು.

ಆದರೆ ಈಗ ಈ ವಿಶೇಷ ಏಕಾಗ್ರತೆ ಬೇರೆ ಸಮಯಗಳಲ್ಲೂ ಸಂಭವಿಸುತ್ತಿರುತ್ತದೆ, ದರ್ಶನ ದಿನಗಳಂದೇ ವಿಶೇಷವಾಗಿ ಎಂದಲ್ಲ. ಅದು ಇತರ ಬಗೆಯ ಸಂದರ್ಭಗಳಲ್ಲಿ, ಇತರ ಪರಿಸ್ಥಿತಿಗಳಿರುವಾಗ ಬಹಳಷ್ಟು ಸಲ ಸಂಭವಿಸುತ್ತದೆ. ಆ ಚಲನೆ ಹೆಚ್ಚು ವೇಗೋತ್ಕರ್ಷ ಹೊಂದಿದೆ, ಮುನ್ನಡೆಯ ಹೆಜ್ಜೆ ಹಾಗೂ ಹಂತಗಳು ಒಂದರ ನಂತರ ಒಂದರಂತೆ ತೀವ್ರಗತಿಯಿಂದ ಯಶಸ್ವಿಯಾಗಿ ಸಾಗಿ ಹೋಗುತ್ತಲಿವೆ. ಮತ್ತು ಬಹಶಃ ಅನುಸರಿಸಿಕೊಂಡು ಹೋಗುವುದು ಹೆಚ್ಚು ಕಠಿಣವಾಗುತ್ತಿದೆ, ಇಲ್ಲವೆ, ಸಂದರ್ಭ ಯಾವುದೇ ಇರಲಿ, ಮನುಷ್ಯ ಬಿಟ್ಟುಕೊಡದೇ ಇರುವುದರ ಬಗ್ಗೆ ಲಕ್ಷ್ಯಗೊಡದಿದ್ದರೆ ಅವನು ಮೊದಲು ಇದ್ದಲ್ಲಿನಗಿಂತ ತೀವ್ರಗತಿಯಲ್ಲಿ ಹಿಂದೆ ಉಳಿದುಕೊಂಡು ಬಿಡುತ್ತಾನೆ. ತಾನು ತಡ ಮಾಡಿದೆ ಇಲ್ಲವೆ ನನ್ನನ್ನು ಕೈ ಬಿಡಲಾಗಿದೆ ಎಂಬ ಭಾವನೆಯನ್ನು ಮನುಷ್ಯ ತಂದುಕೊಳ್ಳುತಾನೆ.

> **ಪ್ರಶ್ನೆ :** ಆದರೆ ಶ್ರೀಮಾತೆಯವರೆ, ಪ್ರತಿಯೊಂದು ದರ್ಶನ ದಿನದಂದು ನೀವು ಕೊಡುತ್ತಿರುವ ಸಂದೇಶದ ಪ್ರಾಮುಖ್ಯತೆಯೇನು? ಉದಾಹರಣೆಗೆ ಇಂದು ಅತಿಮಾನಸ ಪ್ರಕಟಣೆಯನ್ನು ಸಂಕೇತಿಸುವ ಹೂವಿನ ಚಿತ್ರವನ್ನು ಕೊಟ್ಟಿರುವಿರಿ.

**ಶ್ರೀಮಾತೆ :** ಹೌದು, ನಾನು ಇದೀಗ ಹೇಳಿದ ಹಾಗೆ ಇದು ಜಗತ್ತಿನಲ್ಲಿ ಸಹಸ್ರಾರು ಪ್ರತಿಗಳ ಮೂಲಕ ಹರಡಿಕೊಳ್ಳುತ್ತದೆ. ಅದು ಆ ವಿಷಯವನ್ನು ಬಾಹ್ಯೀಕರಣ–ಗೊಳಿಸುವುದಾಗಿದೆ, ಅದರ ಪ್ರಭಾವ ದೂರ ತಲುಪುವಂತೆ ವಿಸ್ತರಿಸುವ ಒಂದು ರೀತಿಯಾಗಿದೆ. ದರ್ಶನ ದಿನದಂದು ಬಿತ್ತರಿಸಲಾಗುವ ಸಂದೇಶವನ್ನು ಕುರಿತು

ಮೊದಲೇ ಚಿಂತನ ಮಾಡಲಾಗಿರುತ್ತದೆ, ಪ್ರಮಾಣೀಕರಿಸಲಾಗಿರುತ್ತದೆ, ಪರೀಕ್ಷೆ ಮಾಡಲಾಗಿರುತ್ತದೆ ಮತ್ತು ಅದನ್ನು ದರ್ಶನ ದಿನದಂದು ಕೊಡಲಾಗುತ್ತದೆ. ಮೊದಲು ಪ್ರಯೋಗ ಮಾಡಲಾಗಿರುತ್ತದೆ, ನಂತರ ಅದನ್ನು ಸಾರ್ವಜನಿಕವಾಗಿ ಸಾರಲಾಗಿರುತ್ತದೆ. ಮೊದಲ ಚಲನೆ ಅಭಿವೃದ್ಧಿಯದಾಗಿರುತ್ತದೆ, ದರ್ಶನ ಸಮಯದಲ್ಲಿ ಅದನ್ನು ವಿಶ್ವವ್ಯಾಪಕವಾಗುವಂತೆ ವಿಸ್ತರಿಸಲಾಗುತ್ತದೆ.

ಶ್ರೀ ಅರವಿಂದರು, ಯಾವಾಗಲೂ, ಎರಡು ಚಲನೆಗಳನ್ನು ಕುರಿತು ಹೇಳುತ್ತಿದ್ದರು: ವ್ಯಕ್ತಿಗತವಾಗಿ ಗುರಿಯನ್ನು ತಲುಪುವುದಕ್ಕೆ ವ್ಯಕ್ತಿಯ ರೂಪಗೊಳ್ಳುವಿಕೆ, ಮತ್ತು ಜಗತ್ತನ್ನು ತಯಾರಿ ಮಾಡುವ ಕಾರ್ಯ. ಏಕೆಂದರೆ ವ್ಯಕ್ತಿಯ ಪ್ರಗತಿ ಕುರಿತು ಹೇಳುವುದಾದರೆ ಅದು ಇಡಿಯಾದುದರ ಪರಿಸ್ಥಿತಿಯಿಂದ ತಡೆಗೊಳಗಾಗುವುದಿಲ್ಲ ಇಲ್ಲವೆ ಸಹಾಯ ಪಡೆಯುವುದಿಲ್ಲ. ಆದರೆ ಇದು ಅವೆರಡರ ನಡುವೆ ಒಂದು ಬಗೆಯ ಸಮತೋಲನವನ್ನು ತರುತ್ತದೆ.

(CWM, 8/263)

*

(ದರ್ಶನ ದಿನಗಳ) ಈ ಸಂದರ್ಭಗಳಲ್ಲಿ ಶ್ರೀ ಅರವಿಂದರ ಆಶೀರ್ವಾದ ಪಡೆದ ಸಂತೋಷವನ್ನು ಭಾವನೆಗೆ ತಂದುಕೊಂಡ ನಂತರ ಏಕಾಗ್ರತೆಯಲ್ಲಿ ಉಳಿದುಕೊಳ್ಳುವುದು ಹೆಚ್ಚು ಒಳ್ಳೆಯದು, ಇತರರೊಡನೆ ಮಿಶ್ರಣಕ್ಕೊಳಗಾಗಿ ಮಾತನಾಡಿ ಆ ಸಂತೋಷವನ್ನು ಹೊರಗೆ ಚೆಲ್ಲಿಕೊಡುವುದರ ಬದಲಾಗಿ ಮನುಷ್ಯ ಅದನ್ನು ತನ್ನ ಹೃದಯದಲ್ಲಿ ಬೀಗ ಹಾಕಿ ಇಟ್ಟುಕೊಳ್ಳುವುದು ಹೆಚ್ಚು ಒಳ್ಳೆಯದು. ಅನುಭವಗಳನ್ನು ಕುರಿತು ನಾವು ಮಾತನಾಡಿದಾಗ ಅವು ಉಗಿಯ ರೂಪದಲ್ಲಿ ಹಾರಿ ಹೋಗುತ್ತವೆ, ಅವು ನಮಗೆ ಕೊಡಬಹುದಾದ ಲಾಭವನ್ನು ನಾವು ಕಳೆದುಕೊಳ್ಳುತ್ತೇವೆ.

(CWM, 16/86–87)

**ಪ್ರಶ್ನೆ :** ಮಧುರ ಮಾತೆಯವರೆ, ಎಪ್ರಿಲ್ 24 ರ ದರ್ಶನಕ್ಕಾಗಿ ಯಾವ ರೀತಿಯಲ್ಲಿ ನಾನು ತಯಾರಿ ಮಾಡಿಕೊಳ್ಳಬೇಕು?

**ಶ್ರೀಮಾತೆ :** ನಿನಗೆ ಅತ್ಯಂತ ಮಹತ್ವದ್ದಾದ ವಿಷಯ ಯಾವುದು ಎಂಬುದನ್ನು ನಿನ್ನೊಳಗೆ ಲಕ್ಷ್ಯಗೊಟ್ಟು ನೋಡಿ ಕಂಡುಹಿಡಿಯಬೇಕು, ಅದಿರದೆ ಇರಲು ನಿನಗೆ ಸಾಧ್ಯವಾಗುವುದಿಲ್ಲ ಎಂಬ ಭಾವನೆ ನಿನಗೆ ಬರಬೇಕು.

ಅದು ಸ್ವಾರಸ್ಯಕರ ಶೋಧ.

**(CWM,** 16/334)

**ಪ್ರಶ್ನೆ :** ದರ್ಶನ ದಿನಗಳಾದ ಡಿಸೆಂಬರ 5 ಮತ್ತು 9 ಹಾಗೂ ಜನ್ಮದಿನ ಇವುಗಳನ್ನು ಯಾವ ರೀತಿಯಲ್ಲಿ ಕಳೆಯಬೇಕು.

**ಶ್ರೀಮಾತೆ :** ಸಾಮಾನ್ಯ ಜ್ಞಾನಕ್ಕಿಂತ ಹೆಚ್ಚು ನಿಜವಾದ ಜ್ಞಾನದ ಶೋಧದಲ್ಲಿ ಕಳೆಯಬೇಕು.

ಮೃತ್ಯು ಎಂದರೇನು ಎಂಬುದನ್ನು ತಿಳಿದುಕೊಳ್ಳಲು ಡಿಸೆಂಬರ 5 ಹಾಗೂ 9 ದಿನಾಂಕಗಳ ಸಮಯವನ್ನು ಉಪಯೋಗಿಸಬೇಕು.

ಜೀವನದ ಉದ್ದೇಶ ಏನಿದೆ ಎಂಬುದನ್ನು ಕಂಡುಹಿಡಿಯಲು ಜನ್ಮದಿನದ ಸಮಯವನ್ನು ಉಪಯೋಗಿಸಬೇಕು.

(**CWM,** 16/415) – ಶ್ರೀಮಾತೆ

*

**ದರ್ಶನ ಕುರಿತು ಸರಿಯಾದ ಮನೋಭಾವ**

ಅಗಸ್ಟ 15 ರ ದರ್ಶನಕ್ಕಾಗಿ ಕೇವಲ 15 ದಿನಗಳು ಉಳಿದಿವೆ ಎಂದು ಯಾರೋ ಒಬ್ಬರು ನನಗೆ ಹೇಳಿದರು. ಪ್ರತಿಯೊಂದು ದಿನವನ್ನು ಅಗಸ್ಟ 15 ಎಂಬಂತೆ ಪರಿಗಣಿಸಬೇಕು ಎಂದು ನಾನು ಉತ್ತರ ನೀಡಿದೆ. ಅದೇ ಸರಿಯಾದ ಮನೋಭಾವ. ಉಚ್ಚತರ ಪ್ರಜ್ಞೆ ಅವತರಣ ಮಾಡಬಹುದಾದ ಇಲ್ಲವೆ ಆ ಪ್ರಜ್ಞೆಯೊಂದಿಗೆ ಸಂಪರ್ಕ ಉಂಟಾಗಬಹುದಾದ ದಿನವೆಂದು ಪ್ರತಿಯೊಂದು ದಿನವನ್ನು ಪರಿಗಣಿಸಬೇಕು. ಆಗ ಅಗಸ್ಟ 15 ರ ದಿನವೇ ಹೆಚ್ಚು ಯಶಸ್ವಿಯಾದದ್ದಾಗುತ್ತದೆ.

*

ಅಗಸ್ಟ 15 ರ ದಿನ ಕುರಿತು ಹೇಳುವುದಾದರೆ ಅದು ವೈಯಕ್ತಿಕ ಸಂದರ್ಭಕ್ಕಿಂತ ಹೆಚ್ಚಾಗಿ ಸರ್ವಸಾಧಾರಣ ಸಂದರ್ಭವಾಗಿರುತ್ತದೆ – ವ್ಯಕ್ತಿಗಾಗಿ ವರ್ಷದ ಯಾವುದೇ ದಿನ ಅಗಸ್ಟ 15 ಆಗಬಹುದು, ಎಂದರೆ ಅದು ಆಂತರಿಕ ಸತ್ತೆಯಲ್ಲಿ ಏನೋ ಒಂದರ ಜನ್ಮದಿನವಾಗಬಹುದು. ಆ ಭಾವನೆಯೊಂದಿಗೆ ಮನುಷ್ಯ ಸಾಧನೆ ಕೈಕೊಳ್ಳಬೇಕು.

(CWSA, 35/523)

ಬಹಳಷ್ಟು ಸಲ ಸಂಭವಿಸುವುದೇನೆಂದರೆ ದರ್ಶನ ದಿನ ಸಮೀಪಿಸುತ್ತಿದ್ದಂತೆ ವಿರೋಧಿ ಶಕ್ತಿಗಳು ವ್ಯಕ್ತಿಗತವಾಗಿ ಇಲ್ಲವೆ ಸರ್ವಸಾಧಾರಣವಾಗಿ ಆಕ್ರಮಣ

ಮಾಡುವುದಕ್ಕೆ ತಮ್ಮನ್ನು ಒಟ್ಟುಗೂಡಿಸಿಕೊಳ್ಳುತ್ತವೆ, ಆ ಆಕ್ರಮಣ ವ್ಯಕ್ತಿಗತವಾಗಿ ಸ್ವೀಕರಿಸಬೇಕಾದದ್ದನ್ನು ಸ್ವೀಕರಿಸಲಾಗದಂತೆ ಮತ್ತು ಸರ್ವಸಾಧಾರಣ ರೀತಿಯಲ್ಲಿ ಕೆಳಗಿಳಿಸಿ ತರಬೇಕಾದದ್ದನ್ನು ತರಲಾಗದಂತೆ ತಡೆಹಿಡಿಯುವುದಕ್ಕಾಗಿ ಇರುತ್ತದೆ. ಹಾಗೆಯೇ ಕೆಲವೊಮ್ಮೆ ದರ್ಶನ ದಿನದ ನಂತರ ಬಲವತ್ತರವಾದ ಆಕ್ರಮಣವಿರುತ್ತದೆ, ಏಕೆಂದರೆ ಕೈಕೊಂಡದ್ದನ್ನು ಇಲ್ಲವಾಗಿಸಲು ಇಲ್ಲವೆ ಅದು ಮುಂದುವರಿದುಕೊಂಡು ಹೋಗುವುದನ್ನು ನಿಲ್ಲಿಸಲು ಆ ವಿರೋಧೀ ಶಕ್ತಿಗಳು ಬಯಸುತ್ತವೆ, ಆದರೆ ವ್ಯಕ್ತಿಯ ಸಂಬಂಧದಲ್ಲಿ ಈ ಆಕ್ರಮಣಕ್ಕೆ ಒಳಗಾಗುವ ಆವಶ್ಯಕತೆ ಇರುವುದಿಲ್ಲ, ಮನುಷ್ಯ ಅದರ ಸ್ವಭಾವದ ಬಗ್ಗೆ ಪ್ರಜ್ಞೆಯುಳ್ಳವನಾಗಿದ್ದರೆ, ಪ್ರತಿಕ್ರಿಯಿಸಿ ಅದನ್ನು ದೂರ ಚೆಲ್ಲಿಕೊಡಬಲ್ಲ. ಇಲ್ಲವೆ ಅದಿನ್ನೂ ಒತ್ತಡ ತರುತ್ತಿದ್ದರೆ ಮನುಷ್ಯ ತನ್ನ ಸಂಕಲ್ಪವನ್ನು ಹಾಗೂ ನಂಬಿಕೆಯನ್ನು ಕಾಪಾಡಿಕೊಂಡು ಬಂದು ಆ ತಾತ್ಕಾಲಿಕ ಅಡೆತಡೆಯಿಂದ ಇನ್ನೂ ಹೆಚ್ಚಿನ ತೆರೆದಿರಿಸಿಕೊಳ್ಳುವಿಕೆ ಮತ್ತು ಹೊಸ ಪ್ರಗತಿ ಇವುಗಳೊಂದಿಗೆ ಹೊರಗೆ ಬರಬಲ್ಲ.

**(CWSA,** 35/525)

ದರ್ಶನಕ್ಕಾಗಿ ಇರುವ ಅತ್ಯಂತ ಒಳ್ಳೆಯ ರೀತಿಯೆಂದರೆ ಮನುಷ್ಯ ತನ್ನನ್ನು ಒಟ್ಟಿಗಿರಿಸಿಕೊಂಡಿರುವುದನ್ನು, ಅಚಂಚಲನಾಗಿರಿಸಿದುದನ್ನು ಕಾಪಾಡಿಕೊಂಡು ಬರಬೇಕು ಮತ್ತು ಶ್ರೀಮಾತೆಯವರು ಕೊಡುವುದು ಏನೇ ಆಗಿರಲಿ ಅದನ್ನು ಸ್ವೀಕರಿಸಲು ತನ್ನನ್ನು ತೆರೆದಿರಿಸಿಕೊಂಡಿರಬೇಕು.

**(CWSA,** 32/569) – ಶ್ರೀ ಅರವಿಂದರು

*

**ಹೊಸ ವರ್ಷಕ್ಕಾಗಿ ಒಂದು ಪ್ರಾರ್ಥನೆ**

ಪ್ರತಿಯೊಂದು ಕ್ಷಣ ಮೊದಲು ಕಂಡಿರದ, ಅನಿರೀಕ್ಷಿತ, ಅಜ್ಞಾತವಾದ ಎಲ್ಲವೂ ನಮ್ಮೆದುರಿಗಿರುತ್ತದೆ, ಪ್ರತಿಯೊಂದು ಕ್ಷಣ ವಿಶ್ವವನ್ನು ಅದರ ಸಮಗ್ರತೆಯಲ್ಲಿ, ಅದರ ಪ್ರತಿಯೊಂದು ಭಾಗದಲ್ಲಿ ಹೊಸದಾಗಿ ಸೃಷ್ಟಿಸಲಾಗುತ್ತದೆ. ಮತ್ತು ನಮ್ಮಲ್ಲಿ ನಿಜವಾಗಿ ಜೀವಿಸುವ ನಂಬಿಕೆ ಇದ್ದರೆ, ಭಗವಂತ, ನಿನ್ನ ಸರ್ವಸಾಮರ್ಥ್ಯದ ನಿನ್ನ ಏಕೈಕ ನೈಜತೆಯ ಬಗ್ಗೆ ಪರಿಪೂರ್ಣ ನಿಶ್ಚಿತತೆ ಇದ್ದರೆ, ಆಗ ನಿನ್ನ ಪ್ರಕಟಣೆ ಪ್ರತಿಯೊಂದು ಕ್ಷಣ ಎಷ್ಟೊಂದು ಸ್ಪಷ್ಟವಾಗುತ್ತದೆಂದರೆ ಇಡೀ ವಿಶ್ವ ಅದರಿಂದ ಪರಿವರ್ತನೆಗೆ ಒಳಗಾಗಬಹುದು. ಆದರೆ ನಾವು ನಮ್ಮ ಸುತ್ತಲಿರುವುದಕ್ಕೆ ಹಾಗೂ ಈ ಮೊದಲು ಗತಿಸಿಹೋದುದಕ್ಕೆ ಎಷ್ಟೊಂದು ಗುಲಾಮಗಿರಿಗೆ ಒಳಗಾಗಿರುತ್ತೇವೆ

ಎಂದರೆ ಮತ್ತು ಪ್ರಕಟವಾದ ವಸ್ತು–ವಿಷಯಗಳ ಇಡಿಯಾಗಿರುವಿಕೆಯಿಂದ ಎಷ್ಟೊಂದು ಪ್ರಭಾವಿತರಾಗಿರುತ್ತೇವೆ ಎಂದರೆ ಮತ್ತು ನಮ್ಮ ನಂಬಿಕೆ ಎಷ್ಟೊಂದು ದುರ್ಬಲವಾಗಿರುತ್ತದೆ ಎಂದರೆ ಅದರಿಂದಾಗಿ ರೂಪ ಪರಿವರ್ತನೆಯ ಶ್ರೇಷ್ಠ ಪವಾಡಕ್ಕಾಗಿ ಮಧ್ಯವರ್ತಿಗಳೆಂದು ಸೇವೆ ಸಲ್ಲಿಸಲು ಇನ್ನೂ ಅಸಮರ್ಥರಾಗಿರುತ್ತೇವೆ. ಆದರೆ ದೈವೀ ಪ್ರಭು, ಅದು ಒಂದು ದಿನದಂದು ಬರಲಿದೆ ಎಂಬುದು ನನಗೆ ತಿಳಿದಿದೆ. ಅದು ಒಂದು ದಿನದಂದು ಬರಲಿದೆ, ಅಂದು ನೀನು ನಮ್ಮೆಡೆಗೆ ಬರುವ ಎಲ್ಲರನ್ನೂ ಪರಿವರ್ತನೆಗೆ ಒಳಪಡಿಸುವಿ; ನೀನು ಅವರನ್ನು ಎಷ್ಟೊಂದು ಮೂಲಭೂತವಾಗಿ ಪರಿವರ್ತನೆಗೆ ಒಳಪಡಿಸುವಿ ಎಂದರೆ ಗತಕಾಲದ ಎಲ್ಲ ಬಂಧನಗಳಿಂದ ಮುಕ್ತರಾದ ಅವರು ನಿನ್ನಲ್ಲಿ ಇಡಿಯಾದ ಹೊಸ ಜೀವನವನ್ನು ಜೀವಿಸಲು ಪ್ರಾರಂಭಿಸುತ್ತಾರೆ, ಆ ಜೀವನ ನಿನ್ನಿಂದ ಮಾತ್ರ, ಅದರ ಸಾರ್ವಭೌಮ ಪ್ರಭು ನೀನೆಂದು ಮಾಡಿದುದಾಗಿರುತ್ತದೆ. ಮತ್ತು ಈ ರೀತಿಯಲ್ಲಿ ಎಲ್ಲ ವೇದನೆಗಳು ಪ್ರಶಾಂತತೆಯಾಗಿ, ಎಲ್ಲ ತಳಮಳ ಶಾಂತಿಯಾಗಿ, ಎಲ್ಲ ಸಂಶಯಗಳು ನಿಶ್ಚಿತತೆಗಳಾಗಿ, ಎಲ್ಲ ಕುರೂಪ ಸಾಮರಸ್ಯದ್ದಾಗಿ, ಎಲ್ಲ ಅಹಂಮನ್ಯತೆ ಸ್ವ–ಅರ್ಪಣೆಯಾಗಿ, ಎಲ್ಲ ಅಂಧಕಾರ ಪ್ರಕಾಶವಾಗಿ, ಎಲ್ಲ ಯಾತನೆಗಳು ಬದಲಾಗದ ಸಂತೋಷವಾಗಿ ಪರಿವರ್ತನೆಗೊಳ್ಳುತ್ತವೆ.

ಆದರೆ ದೈವೀ ಪ್ರಭು, ಈ ಸುಂದರ ಪವಾಡವನ್ನು ನೀನು ಈಗಾಗಲೆ ಕೈಕೊಳ್ಳುತ್ತಿರುವಿಯಲ್ಲವೆ? ಅದು ನಮ್ಮ ಸುತ್ತಲೆಲ್ಲ ಎಲ್ಲೆಡೆಯಲ್ಲಿ ಅರಳಿಕೊಳ್ಳುತ್ತಲಿದೆ!

ಓ, ಸೌಂದರ್ಯ ಹಾಗೂ ಪ್ರೇಮ ಇವುಗಳ ದೈವೀ ನಿಯಮವೆ, ಪರಮೋಚ್ಚ ಮುಕ್ತಿದಾಯಕನೆ, ನಿನ್ನ ಸಾಮರ್ಥ್ಯಕ್ಕೆ ಯಾವ ಅಡೆತಡೆ ಇಲ್ಲ. ಕೇವಲ ನಮ್ಮ ಕುರುಡುತನ ನಿನ್ನ ಸತತ ವಿಜಯದ, ಸಮಾಧಾನಪಡಿಸುವ ದೃಶ್ಯವನ್ನು ನಮ್ಮಿಂದ ಕಿತ್ತುಕೊಳ್ಳುತ್ತದೆ.

ನನ್ನ ಹೃದಯ ಸಂತೋಷದ ಸ್ತೋತ್ರವನ್ನು ಹಾಡಿ ಹೇಳುತ್ತದೆ ಮತ್ತು ನನ್ನ ಯೋಚನೆ ಸಂತೋಷದಿಂದ ಪ್ರಕಾಶಿತಗೊಂಡಿದೆ.

ನಿನ್ನ ವಿಶ್ವಾತೀತ ಮತ್ತು ಅದ್ಭುತ ಪ್ರೇಮ ಜಗತ್ತಿನ ಸಾರ್ವಭೌಮ ಪ್ರಭುವಾಗಿದೆ.

(**CWM,** 1/54–55) – ಶ್ರೀಮಾತೆ

*

# 2016 ರ ವಿಶೇಷ ದಿನಾಂಕಗಳು

ಜನೆವರಿ 1 : ಹೊಸ ವರ್ಷದ ದಿನ (Bonne Annee)

ಫೆಬ್ರುವರಿ 21 : ಶ್ರೀಮಾತೆಯವರ 138 ನೆಯ ಜನ್ಮದಿನ

ಫೆಬ್ರುವರಿ 28 : ಅರೋವಿಲೆಯ 46 ನೆಯ ಜನ್ಮದಿನ

ಫೆಬ್ರುವರಿ 29 : ನಾಲ್ಕು ವರ್ಷಗಳಿಗೊಮ್ಮೆ ಬರುವ ಅತಿಮಾನಸ ಅವರೋಹಣದ ಹದಿನೈದನೆಯ ವಾರ್ಷಿಕ ದಿನಾಚರಣೆ

ಮಾರ್ಚ 29 : ಶ್ರೀಮಾತೆಯವರು ಪಾಂಡಿಚೇರಿಗೆ ಮೊದಲ ಸಲ ಬಂದು ಶ್ರೀ ಅರವಿಂದರನ್ನು ಭೇಟಿ ಮಾಡಿದ ದಿನದ 102 ನೆಯ ವಾರ್ಷಿಕ ದಿನಾಚರಣೆ

ಎಪ್ರಿಲ್ 4 : ಶ್ರೀ ಅರವಿಂದರು ಪಾಂಡಿಚೇರಿಗೆ ಬಂದ ದಿನದ 106 ನೆಯ ವಾರ್ಷಿಕ ದಿನಾಚರಣೆ

ಎಪ್ರಿಲ್ 24 : ಶ್ರೀಮಾತೆಯವರು ಕೊನೆಯ ಸಲ ಪಾಂಡಿಚೇರಿಗೆ ಬಂದ ದಿನದ 96 ನೆಯ ವಾರ್ಷಿಕ ದಿನಾಚರಣೆ

ಅಗಸ್ಟ 15 : ಶ್ರೀ ಅರವಿಂದರ 144 ನೆಯ ಜನ್ಮದಿನ

ಸಪ್ಟಂಬರ 19 : ಶ್ರೀ ಅರವಿಂದೋ ಸೊಸೈಟಿಯ 56 ನೆಯ ವಾರ್ಷಿಕ ದಿನಾಚರಣೆ

ನವ್ಹೆಂಬರ 17 : ಶ್ರೀಮಾತೆಯವರ ಮಹಾಸಮಾಧಿ ದಿನ

ನವ್ಹೆಂಬರ 20 : ಶ್ರೀಮಾತೆಯವರ ದೇಹವನ್ನು ವಿಶ್ರಾಂತಿ ಸ್ಥಿತಿಯಲ್ಲಿ ಇರಿಸಲಾಯಿತು

ನವ್ಹೆಂಬರ 24 : ಸಿದ್ಧಿ ದಿನ, ಶ್ರೀಕೃಷ್ಣ ಭೌತಿಕದಲ್ಲಿ ಅವತರಿಸಿದ್ದು 1926 ರಲ್ಲಿ ಶ್ರೀ ಅರಬಿಂದೋ ಆಶ್ರಮದ ಜನ್ಮ ತಾಳುವಿಕೆ

ಡಿಸೆಂಬರ 2 : ಶಾರೀರಿಕ ಶಿಕ್ಷಣದ ವಾರ್ಷಿಕ ಅರ್ಪಣೆ

ಡಿಸೆಂಬರ 5 : ಶ್ರೀ ಅರವಿಂದರ ಮಹಾಸಮಾಧಿ

ಡಿಸೆಂಬರ 9 : ಶ್ರೀ ಅರವಿಂದರ ದೇಹವನ್ನು ವಿಶ್ರಾಂತಿಯ ಸ್ಥಿತಿಯಲ್ಲಿ ಇರಿಸಿದ್ದು

ವಿಶೇಷ ದರ್ಶನ ದಿನ : ಫೆಬ್ರುವರಿ 29, 2016

– ಅತಿಮಾನಸ ಪ್ರಕಟಣೆ (ದೈವೀಪ್ರಭುವಿನ ದಿನ)

## ನಾಲ್ಕು ದರ್ಶನ ದಿನಗಳು

ಫೆಬ್ರುವರಿ 21 : ಶ್ರೀಮಾತೆಯವರ ಜನ್ಮದಿನ (1878)

ಎಪ್ರಿಲ್ 24 : ಶ್ರೀಮಾತೆಯವರು ಕೊನೆಯ ಸಲ ಪಾಂಡಿಚೇರಿಗೆ ಬಂದದ್ದು (1920)

ಅಗಸ್ಟ 15 : ಶ್ರೀ ಅರವಿಂದರ ಜನ್ಮದಿನ (1872)

ನವ್ಹೆಂಬರ 24 : ಸಿದ್ಧಿದಿನ (ವಿಜಯದ ದಿನ) ಅಧಿಮಾನಸದ ದೇವಪ್ರಮುಖ ಶ್ರೀಕೃಷ್ಣ ಭೌತಿಕದಲ್ಲಿ ಅವರೋಹಣ ಮಾಡಿದ್ದು (1926)

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 05/12/2015 ರ ಶನಿವಾರ "ಶ್ರೀ ಅರವಿಂದರ ಮಹಾಸಮಾಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.20 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಆನಂತರ 10.30 ರಿಂದ 12.30 ರವರೆಗೆ "Mrtyor-Maa Amrtam Gamaya" ಎಂಬ ವಿಷಯದ ಬಗ್ಗೆ ಶ್ರೀ ಎಸ್.ಎಸ್. ಲಹರಿ, ಧರ್ಮದರ್ಶಿ, ಶ್ರೀ ಅರವಿಂದ ಸಂಕೀರ್ಣ, ಬೆಂಗಳೂರು ಇವರು ಉಪನ್ಯಾಸ ನೀಡಿದರು.

ದಿನಾಂಕ 06/12/2015 ರಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್‌ನ ಶಾಲಾ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ತರಗತಿ ಒಂದರಿಂದ ಹತ್ತರವರೆಗೆ ಮೂರು ವಿಭಾಗಗಳಲ್ಲಿ ಕಾರ್ಯಕ್ರಮವನ್ನು ನಡೆಸಲಾಗಿತ್ತು. ಸಂಜೆ ಏಳನೇ ತರಗತಿಯಿಂದ ಹತ್ತನೇ ತರಗತಿವರೆಗೆ ನಡೆದ ಶಾಲಾ ವಾರ್ಷಿಕೋತ್ಸವದಲ್ಲಿ ಶಾಲೆಯ ಚೇರಮನ್‌ರಾದ ಶ್ರೀಯುತ ಅಜಿತ್ ಸಬ್ನೀಸ್‌ರವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್ ಧರ್ಮದರ್ಶಿಗಳಾದ ಶ್ರೀಯುತ ಎಸ್.ಎಸ್. ಲಹರಿಯವರು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ 2014–15ನೇ ಸಾಲಿನ ಹತ್ತನೇ ತರಗತಿಯಲ್ಲಿ

ವಿಶೇಷ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಬಳಿಕ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ನೃತ್ಯ, ಸಂಗೀತ ಮತ್ತು ನಟನಾ ವಿಭಾಗಗಳಲ್ಲಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸಿದರು.

ದಿನಾಂಕ 07/12/2015 ರಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್‌ನ ನರ್ಸರಿ ವಿಭಾಗದ ವಾರ್ಷಿಕೋತ್ಸವವು ಜರಗಿತು. ಪೂರ್ವ ಪ್ರಾಥಮಿಕ ತರಗತಿಯ ಎಲ್ಲ ಮಕ್ಕಳು ತಮ್ಮ ಕೌಶಲ್ಯವನ್ನು ಪ್ರದರ್ಶಿಸಿದರು. ಶಿಕ್ಷಕಿ ಶ್ರೀಮತಿ ಚಿತ್ರ ನಿರೂಪಿಸಿದ ಈ ಕಾರ್ಯಕ್ರಮದಲ್ಲಿ ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ಮತ್ತು ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬ ಉಪಸ್ಥಿತರಿದ್ದರು. ಶಾಲಾ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳು ಸಕ್ರಿಯವಾಗಿ ಭಾಗವಹಿಸಿದರು.



*Each victory gained over oneself means new strength to gain more victories.*

- Sri Aurobindo

**RNI No. 22511/1971**
No. of Pages **36 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.